ಹೆಣ್ಣ ಹೆಂಗ್ಸು... ಏನ ಮಾಡ್ಲಿ' ಎಂದು ಅತ್ತಳು. ಬಂಡೆಪ್ಪ ಘಳಿಗೆ ಮೌನವಾಗಿದ್ದ ಮತ್ತೆ ನಿರಾಯಾಸವಾಗಿ ಹೇಳಿದ.

'ಹೋಗ್ಲಿಬಿಡು ಅಚ್ಚಕ್ಕ... ನಾ ಇದ್ದೀನಿ, ನನ್ನ ಜೀವಮಾನ ಇರೋತನ್ಕ ನೋಡ್ಕೊತೇನಿ. ಗೋಪ್ಯಾಂದು ಸುಬ್ಬಿ ಜವಾಬ್ದಾರಿ ನಂದು' ಎಂದ ಕೈಯಲ್ಲಿಯ ತಂಬಾಕನ್ನು ಹೆಬ್ಬೆರಳಿನಿಂದ ತೀಡುತ್ತ ಆಣೆಕಲ್ಲು ಆಡುತ್ತಿದ್ದ ಸುಬ್ಬಿಯ ಕಡೆ ತಿರುಗಿ,

'ಸುಬ್ಬಿ... ಹುಸೇನಿ ಮನಿಗೆ ಹೋಗಿ ನಾ... ಬಂದಿನಿ... ಈಗ ಬರ್ತೀನಿ ಅಂತ ಹೇಳಹೋಗು' ಎಂದ. ಸುಬ್ಬಿ ಆಣೆಕಲ್ಲಗಳನ್ನು ಕಿಸೆಯಲ್ಲಿ ಹಾಕಿಕೊಂಡು... ಅಂಗಳ ದಾಟಿ ಓಡಿಹೋದಳು. ಬಂಡೊಮಾಮ ಬಂದಾಗಲೆಲ್ಲಾ... ಹುಸೇನಿ ಮನಿಗೆ ಸುದ್ದಿ ತಲುಪಿಸುವ ಹೊಣೆ ಸುಬ್ಬಿಯದು. 'ಹುಸೇನಿ ಬಂಡೆಪ್ಪನ ರಖವಾಲಿ' ಎಂದು ಬೇವೂರಿನ ಜನ ಆಡಿಕೊಂಡಿದ್ದನ್ನು ಅವಳು ಕೇಳಿದ್ದಾಳೆ. ರಖವಾಲಿಯ ಅರ್ಥ ಅವಳಿಗೆ ಗೊತ್ತಿಲ್ಲ. ಆದರೆ ಅವರಿಬ್ಬರ ನಡುವಿನ ದಲಾಲಿಯ ಕೆಲಸ ಮಾತ್ರ ಅವಳದು. ಅದಕ್ಕೆ ಪ್ರತಿಯಾಗಿ ಬಂಡೆಪ್ಪನಿಂದ ಆ ಹತ್ತು ಹನ್ನೆರಡು ವರ್ಷದ ಬಾಲೆಗೆ ಸಿಗುತ್ತಿದ್ದುದು– ಬಳೆ, ರಿಬ್ಬನ್ನು ಪೆಪ್ಪರಮೆಂಟುಗಳು.

ಬಂಡೂಮಾಮ ಅಚ್ಚಕ್ಕನ ತೀರ ಅಚ್ಚೆಯ ತಮ್ಮ. ಆತ ಮೂವತ್‌ಐದು ವರ್ಷದ ಗಂಡಸು. ಬೇವೂರಿನಲ್ಲಿ ಬಾಣಗದಿನ್ನಿಯಲ್ಲಿ ಭಗವತಿಯಲ್ಲಿ ಅವನೇ ತಲೆ ಉಪಯೋಗಿಸಿ ಗಳಿಸಿಕೊಂಡ ಆಸ್ತಿಯಿದೆ. ಎಲ್ಲ ಹಳ್ಳಿಗಳಲ್ಲೂ ಒಬ್ಬೊಬ್ಬ ಹುಸೇನಿಯರಿದ್ದಾರೆ ಬಂಡೆಪ್ಪನಿಗೆ. ಹೀಗೆ ಅಲೆಯುವ ಗುಂಡುಗೋವಿ ಅವನು. ಕರಿಯ ಬಣ್ಣದ, ದೈತ್ಯಾಕಾರದ, ಬಂಡೂಮಾಮನನ್ನು ಕಂಡರೆ ಸುಬ್ಬಿಗೆ ಹೆದರಿಕೆಯಿಲ್ಲ ನಿಜ. ಅವನು ಬಂದರೆ ಅವಳಿಗೆ ಹಬ್ಬವೆ. ಅವಳಿಗೆ ಬಳೆ, ರಿಬ್ಬನ್ನು, ಲೋಲಾಕು, ಬಣ್ಣ ಬಣ್ಣದ ಅಂಗಿ, ಎಲ್ಲ ತರುವವ. ಬೇವೂರಿನ ಜಾತ್ರೆ ಬಂತೆಂದರೆ ಹೆಗಲಮೇಲೆ ಹೊತ್ತುಕೊಂಡೊ ಇಲ್ಲಾ ಕೈ ಹಿಡಿದು ಕರೆದುಕೊಂಡೊ ಹೋಗಿ ಬೇಕಾದ್ದೆಲ್ಲ ಕೊಡಿಸುತ್ತಾನೆಂಬ ಸಂಭ್ರಮ ಅವಳಿಗೆ. ಹೀಗಾಗಿಯೇ ಬಂಡೂಮಾಮನ ಹುಸೇನಿಯ ರಖವಾಲಿತನಕ್ಕೆ ಕಟ್ಟುಬಿದ್ದ ಸೇತುವೆಯಾಗಿದ್ದಳು ಸುಬ್ಬಿ. ಅವರ ಸಂಬಂಧದ ಸೂಕ್ಷ್ಮತೆಯನ್ನು ತಿಳಿಯಲಾರದ ಮೂಢ ವಯಸ್ಸು ಅವಳದು. ಆದರೆ ಒಂದು ಕಾರ್ತೀಕದ ಬಾಣಗದಿನ್ನಿಯ ಜಾತ್ರೆಯಲ್ಲಿ ಅವರಿಬ್ಬರೂ ಇವಳಿಗೆ ತಿನ್ನಲು ಬಜಿ– ಸೇವು ಕೊಡಿಸಿ ಬೇವಿನ ಮರದಡಿ ಕೂಡಿಸಿ ದೂರದ ಪೊದೆಗಳ ಹಿಂದೆ ಹೋದಾಗ ಬೆಪ್ಪಳಂತೆ ಕುಳಿತಿದ್ದ ಸುಬ್ಬಿಗೆ ಗೂಗೆಯ ಕೆಟ್ಟ ಸ್ವರ ಕೇಳಿದಂತಾಗಿ 'ಬೇವಿನ ಮರದಾಗ ದೆವ್ವ ಇದಾವ ಸುಬ್ಬಿ' ಎಂದು ಗೆಳತಿ ಹೇಳಿದ್ದ ಮಾತು ನೆನಪಾಯಿತು. ಹೆದರಿಕೆಯಿಂದಲೋ ಕುತೂಹಲದಿಂದಲೊ ತಾನು ಬಂಡೆಪ್ಪ– ಹುಸೇನಿ ಹೋದೆಡೆ ಹೋಗಿ ಮರೆ ನಿಂತಾಗ ಕಂಡದ್ದು ಬಂಡೆಪ್ಪನ ದೈತ್ಯಾಕಾರದ ದೇಹ, ಹುಸೇನಿಯ ಮಟ್ಟಸವಾದ ದೇಹವನ್ನು ತೇಕುವ ಬಂಡೂಮಾವಾ, ನರಳುವ ಹುಸೇನಿ.

'ಅಯ್ಯಯ್ಯೋ ಇಸ್ಸಿ ಬಂಡೂಮಾಮ ಎಷ್ಟು ಹಲ್ಕಟ ಇದ್ದಾನ' ಎಂದು ಓಡಿ ಬಂದು ಮರದಡಿ ತೇಕುತ್ತ ಕುಳಿತಿದ್ದವಳಿಗೆ ದೆವ್ವದ ಭಯವೂ ಇರಲಿಲ್ಲ. ಬಹುಶಃ ಅಂದಿನಿಂದಲೇ ಸುಬ್ಬಿಗೆ ಬಂಡೂಮಾಮನೆಂದರೆ ಒಂದು ತರದ ಹೇಸಿಗೆಯಾಗುತ್ತಿತ್ತು.

ಸುಬ್ಬಿಗೆ ಬಾಲ್ಯ ಕಳೆದು ಆರು ವರ್ಷಗಳು ಉರುಳಿದ ಮೇಲೆ ಹರೆಯಕ್ಕೆ ಬಂದಾಗಿನ ದಿನಗಳವು. ಇತ್ತೀಚೆಗೆ ಆದ ಘಟನೆಗಳು ಅವಳ ಅಂತರಂಗದ ಮೇಲೆ ದಾಳಿಮಾಡಿದಾಗ 'ಹರೇ ಬಂದು ನನ್ನ ಬದುಕಗೇಡಿ ಮಾಡ್ತು' ಎನ್ನುವ ವ್ಯಥೆಯಲ್ಲಿ ಸುಬ್ಬಿ ಬಳಲಿದ್ದಾಳೆ.

ಅಶ್ವೀಜ ಕಳೆದು ಕಾರ್ತೀಕದ ಮೊದಲ ದಿನಗಳವು. ಬೇವೂರಿನ ತನ್ನ ಎರೆಹೊಲಕ್ಕೆ ಬೀಜ